೧೨೯೫(೧೫೩೫) ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸ್ಮಶಾನ ಭೂಮಿಗಾಗಿ ಬಹಳಷ್ಟು ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದರಲ್ಲೂ ಪರಿಶಿಷ್ಟ ಜಾತಿಯವರಿಂದ;

ಆ) ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಜಮೀನುಗಳನ್ನು ತುರ್ತುಗತಿಯಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಸಂಬಂಧಿಸಿದ ನಿಯಮಗಳನ್ನು ತಿದ್ದುಪಡಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಹೌದು

ಆ) ಭೂ ಸ್ವಾಧೀನ ಕಾಯ್ದೆ ೧೯೯೪ರ ಕಲಂ ೧೭(೧)ರಡಿಯಲ್ಲಿ ಸ್ಮಶಾನಕ್ಕಾಗಿ ಜಮಿನುಗಳನ್ನು ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆದಕಾರಣ ಸದರಿ ನಿಯಮಗಳಿಗೆ ತಿದ್ದುಪಡಿ ಮಾಡುವ ವಿಚಾರ ಉದ್ಭವಿಸುವುದಿಲ್ಲ.

ನೆಲಮಂಗಲ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯವರು ಸಸಿಗಳನ್ನು ನೆಡಲಾಗಿರುವುದು

೧೨೯೬(೧೫೩೭)ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಅರಣ್ಯ ಇಲಾಖೆಯಡಿಯಲ್ಲಿ ಎಷ್ಟು ಸಸಿಗಳನ್ನು ನಡಲಾಗಿದೆ;

ಆ) ಯಾವ ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ;

ಇ) ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ?

ಈ) ಈ ಸಸಿಗಳ ಪೈಕಿ ಎಷ್ಟು ಸಸಿಗಳು ಉಳಿದಿವೆ;

ಉ) ಈ ವರ್ಷ ಅದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಈಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):-

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ೩ ವರ್ಷಗಳಲ್ಲಿ ಈ ಕೆಳಕಂಡಂತೆ ಸಸಿಗಳನ್ನು ನೆಡಲಾಗಿದೆ:

೧೯೮೯-೯೦ - ೪೬೦೦ ಸಸಿಗಳು

೧೯೯೦-೯೧ - ೫೮೦೯೬ ಸಸಿಗಳು

೧೯೯೧-೯೨ - ೧೪೬೦೦೦ ಸಸಿಗಳು

ಆ) ಈ ಕ್ಷೇತ್ರದಲ್ಲಿ ಸಿಸ್ಸು, ಗಾಳಿಮರ, ಹುಣಸೆ, ಹಿಪ್ಪೆ, ನೇರಳೆ, ಜಾಲಿ, ಮತ್ತಿ, ಫೆಲ್ಟೋಫಾರಂ, ಆಕೇಶಿಯಾ, ಬಿದಿರು, ಕರಿಜಾಲಿ, ಹೊಂಗೆ, ಹಲಸು, ಸೀಮೆ ತಂಗಡಿ, ಬನ್ನಿ

ಮುಂತಾದ ಸಸಿಗಳನ್ನು ನೆಡಲಾಗಿದೆ

ಇ) ಇದಕ್ಕಾಗಿ ಖರ್ಚಾದ ಹಣದ ವಿವರ ಕಳೆದ ೩ ವರ್ಷಗಳದ್ದು ಕೆಳಗಿನಂತಿದೆ

೧೯೮೯-೯೦ ರೂ. ೨೯,೬೩೬-೦೦

೧೯೯೦-೯೧ ರೂ. ೨೪,೪೭,೫೧೭-೦೦

೧೯೯೧-೯೨ ರೂ. ೭,೧೨,೨೧೩-೦೦

ಈ) ಈ ಸಸಿಗಳ ಪೈಕಿ ಶೇ. ೭೫ರಿಂದ ೮೦ ಸಸಿಗಳು ಉಳಿದುಕೊಂಡಿವೆ.

ಉ) ೧೯೯೧-೯೨ನೇ ಸಾಲಿನಲ್ಲಿ ಇದಕ್ಕಾಗಿ ಬಿಡುಗಡೆ ಮಾಡಲಾದ ಹಣ ರೂ. ೧೩,೨೦,೯೮೩ ಆಗಿರುತ್ತದೆ.

ಹೆಸರಘಟ್ಟದಲ್ಲಿರುವ ಮೀನು ಸಂಶೋಧನಾ ಇಲಾಖೆಯಲ್ಲಿರುವ ದಿನಗೂಲಿ ನೌಕರರು

೧೨೭೭(೧೫೩೮)ಶ್ರೀ ಆಂಜನ ಮೂರ್ತಿ (ನೆಲಮಂಗಲ):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹೆಸರಘಟ್ಟದಲ್ಲಿರುವ ಮೀನು ಸಂಶೋಧನಾ ಇಲಾಖೆಯಲ್ಲಿ ಎಷ್ಟು ಜನ ದಿನಗೂಲಿ ನೌಕರರು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು) ಕೆಲಸ ಮಾಡುತ್ತಿದ್ದಾರೆ;

ಆ) ಅವರುಗಳು ಸುಮಾರು ೮-೧೦ ವರ್ಷಗಳಿಂದ ದಿನಕೂಲಿ ನೌಕರರಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅವರು ಸುಮಾರು ಬಾಕಿ ಅರ್ಜಿ ಕೊಟ್ಟು ಅವರ ಕೆಲಸಗಳನ್ನು ನ್ಯಾಯಾಲಯದ ಆದೇಶದಂತೆ ಖಾಯಂಗೊಳಿಸಲು ಕೋರಿದ್ದರೂ ಕೂಡ, ಅವರ ಕೆಲಸವನ್ನು ಖಾಯಂ ಮಾಡದೇ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕಾನೂನಿನ ಪ್ರಕಾರ ಮೇಲ್ಕಂಡ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ದಿನಗೂಲಿ ನೌಕರರ ಕೆಲಸ ಖಾಯಂಗೊಳಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು):-

ಅ) ಒಬ್ಬರು

ಆ) ಹೌದು

ಇ) ಇವರುಗಳ ಸೇವೆಯನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಖಾಯಂ ಮಾಡಲಾಗಿದೆ.